

ಅರುಣ ಪಿ. ಭಟ್ಟ

# ವಾರಭವಿಷ್ಯ 21.11.2019ರಿಂದ 27.11.2019




ಉದ್ಯೋಗದಲ್ಲಿ ವಾರದ ಶುರುವಿನಲ್ಲೇ ಯಶಸ್ಸು ದೊರೆಯುತ್ತದೆ. ಸಾಮಾಜಿಕವಾಗಿ ಜನಪ್ರಿಯತೆ ಹೆಚ್ಚಾಗಲಿದೆ. ಸಾರ್ವಜನಿಕ ಜೀವನದಲ್ಲಿ ಇರುವವರು ಕೆಲ ಸವಾಲುಗಳನ್ನು ಸ್ವೀಕರಿಸಲಿದ್ದೀರಿ. ಆರೋಗ್ಯವು ಉತ್ತಮವಾಗಿರುತ್ತದೆ.

ಶುಭದಿನ: 24. ನವದುರ್ಗಾ ಆರಾಧನೆ ಮಾಡಿರಿ.




ವಾರದ ಆರಂಭದಲ್ಲಿ ಅನುಕೂಲ ಆಗಲಿದೆ. ಕುಟುಂಬದಲ್ಲಿ ಸಂತಸದ ವಾತಾವರಣ ಇರುತ್ತದೆ. ಕಾನೂನು ವಿಚಾರಗಳಲ್ಲಿ ಮೇಲುಗೈ ಸಾಧಿಸುತ್ತೀರಿ. ಸಾಮಾಜಿಕ ಕಾರ್ಯಕರ್ತರಿಗೆ ಪ್ರೀತಿಪಾತ್ರರ ಜತೆಗೆ ಬಾಂಧವ್ಯ ಸುಮಧುರ ಆಗುತ್ತದೆ.

ಶುಭದಿನ: 25. ಹನುಮಾನ್ ಚಾಲಿಸ್ ಪಠಿಸಿರಿ.




ವೈವಾಹಿಕ ಜೀವನ ಸಂತೋಷವಾಗಿರುತ್ತದೆ. ಒಳ್ಳೆಯ ಆಹಾರ, ಫ್ಯಾಷನ್, ಬಟ್ಟೆಗಳು ಮತ್ತು ಮನರಂಜನೆ ವಿಚಾರದಲ್ಲಿ ಆಯ್ಕೆಗೆ ತಕ್ಕಂತೆ ನಡೆದುಕೊಳ್ಳುತ್ತೀರಿ. ಆರ್ಥಿಕ ವಿಚಾರದಲ್ಲಿ ಉತ್ತಮ ಲಾಭವನ್ನು ಕಾಣಲಿದ್ದೀರಿ.

ಶುಭದಿನ: 26. ಸೌಂದರ್ಯ ಲಹರಿ ಪಠಿಸಿರಿ.




ನಿಮ್ಮ ವೃತ್ತಿಪರ ಬೆಳವಣಿಗೆಗೆ ಪ್ರಶಂಸೆ. ಸಾಲ ಮರುಪಾವತಿ ಮಾಡಲು ಸಾಧ್ಯವಾಗುತ್ತದೆ. ಪ್ರೀತಿ ಪಾತ್ರರಿಗೆ ಔತಣ ನೀಡುವ ಸಾಧ್ಯತೆಯಿದೆ. ಹಳಸಲು ಆಹಾರ ಪದಾರ್ಥಗಳ ಸೇವನೆ ಮಾಡಬೇಡಿ. ವೈವಾಹಿಕ ಜೀವನ ಸುಖಕರವಾಗಿರುತ್ತದೆ.

ಶುಭದಿನ: 23. ಲಿಂಗಾಷ್ಟಕ ಪಠಿಸಿರಿ.




ವಿವಿಧ ಕ್ಷೇತ್ರಗಳಲ್ಲಿ ಇರುವವರಿಗೆ ವರ್ಚಸ್ಸು ಹೆಚ್ಚಲಿದೆ. ಬಡ್ತಿ ನಿರೀಕ್ಷೆ ಮಾಡುತ್ತಿರುವವರು ಶುಭ ಸುದ್ದಿ. ಕಲೆ, ಸಾಹಿತ್ಯ, ಸಿನಿಮಾ, ಸಂಗೀತ, ತಂತ್ರಜ್ಞಾನ, ನಾಯಕತ್ವ ಕ್ಷೇತ್ರಗಳಲ್ಲಿ ಇರುವವರಿಗೆ ಆದಾಯ ಹೆಚ್ಚಾಗಲಿದೆ.

ಶುಭದಿನ: 22. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ಕುಟುಂಬವು ಈ ವಾರ ನಿಮ್ಮ ಪಾಲಿಗೆ ಆದ್ಯತೆ ಆಗಲಿದೆ. ಮನೆಯಲ್ಲಿ ಸಕಾರಾತ್ಮಕ ವಾತಾವರಣ ಇರಲಿದೆ. ನಿಮ್ಮ ಕಚೇರಿಯಲ್ಲಿ ಈವರೆಗೆ ತಿಳಿಯದೆ ಇದ್ದ ರಹಸ್ಯ ಸಂಗತಿಯೊಂದು ಗೊತ್ತಾಗಲಿದೆ. ಆರೋಗ್ಯ ಉತ್ತಮವಾಗಿ ಇರಲಿದೆ.

ಶುಭದಿನ: 24. ಕಾಲಭೈರವನ ಸೇವೆ ಮಾಡಿರಿ.




ವಾರದ ಆರಂಭ ಬರಹವನ್ನೇ ವೃತ್ತಿಯಾಗಿ ಮಾಡಿಕೊಂಡವರಿಗೆ ಅತ್ಯುತ್ತಮವಾಗಿದೆ. ಮಾಹಿತಿ ತಂತ್ರಜ್ಞಾನವನ್ನು ಸಮರ್ಥವಾಗಿ ಬಳಕೆ ಮಾಡಿಕೊಳ್ಳಲಿದ್ದೀರಿ. ಕುಟುಂಬ ಸದಸ್ಯರ ಜತೆಗೆ ಉತ್ತಮ ಬಾಂಧವ್ಯ ಏರ್ಪಡಲಿದೆ. ನೋವುಗಳಿಂದ ಮುಕ್ತಿ.

ಶುಭದಿನ: 26. ವಿಷ್ಣು ಸಹಸ್ರನಾಮ ಪಠಿಸಿರಿ.




ಆಸ್ತಿ ವಿಚಾರದಲ್ಲಿ ಲಾಭ ಪಡೆಯುವ ಯೋಗವಿದೆ. ಮನೆಯಲ್ಲಿ ಶುಭ ಕಾರ್ಯಗಳನ್ನು ಆಯೋಜಿಸಿ, ರುಚಿ ರುಚಿಯಾದ ಅಡುಗೆ ಸವಿಯಲಿದ್ದೀರಿ. ಕಾನೂನು ಕಟ್ಲೆಗಳಲ್ಲಿ ನಿಮ್ಮ ಪರವಾದ ಪ್ರಗತಿ ಇದೆ. ಎಚ್ಚರಿಕೆಯಿಂದ ಇರಬೇಕು.

ಶುಭದಿನ: 24. ಈಶ್ವರನಿಗೆ ರುದ್ರಾಭಿಷೇಕ ಮಾಡಿರಿ.




ವಾರದ ಆರಂಭದಲ್ಲೇ ಶುಭ ಸುದ್ದಿ ಕೇಳಲಿದ್ದೀರಿ. ಈ ಹಿಂದಿನ ದೈಹಿಕ ಸಮಸ್ಯೆಗಳು ನಿವಾರಣೆಯಾಗಲಿವೆ. ಆತ್ಮವಿಶ್ವಾಸ ಸಕಾರಾತ್ಮಕ ಆಲೋಚನೆ ವೃದ್ಧಿಯಾಗಲಿದೆ. ವ್ಯವಹಾರಗಳಲ್ಲಿ ಬದಲಾವಣೆ ಮಾಡಿಕೊಳ್ಳದೆ ಮುಂದುವರಿಯಿರಿ.

ಶುಭದಿನ: 25. ಸುಬ್ರಹ್ಮಣ್ಯ ಜಪ ಗೋಪೂಜೆ ಮಾಡಿರಿ.




ಹಣಕಾಸು ಹೂಡಿಕೆ ಮಾಡಿದ್ದನ್ನು ಈಗ ಬಳಸಿಕೊಳ್ಳಲು ಮುಂದಾಗಲಿದ್ದೀರಿ. ಕೋರ್ಟ್ ವ್ಯವಹಾರಗಳು ನಿಮ್ಮ ಪರವಾಗಿ ಆಗುವ ಸಾಧ್ಯತೆ ಇದೆ. ಭವಿಷ್ಯದ ನಿಮ್ಮ ಗುರಿಯನ್ನು ನಿರ್ಧರಿಸುವ ಕಡೆಗೆ ಗಮನ ಕೇಂದ್ರೀಕರಿಸುತ್ತೀರಿ.

ಶುಭದಿನ: 24. ಲಕ್ಷ್ಮೀ ನಾರಾಯಣ ಹೃದಯ ಪಾರಾಯಣ ಮಾಡಿರಿ.




ಆರ್ಥಿಕ ಪ್ರಗತಿ ಸಾಧಿಸಲು ಉತ್ತಮ ಅವಕಾಶಗಳಿವೆ. ಸರಿಯಾದ ದಿಕ್ಕಿನಲ್ಲಿ ಪ್ರಯತ್ನ ಪಡಲು ಸೂಕ್ತ ಸಮಯ. ಬೌದ್ಧಿಕ ಮತ್ತು ದೈಹಿಕ ಸಾಮರ್ಥ್ಯ ವೃದ್ಧಿ ಆಗಲಿದೆ. ಸ್ಪರ್ಧಾತ್ಮಕ ಕ್ಷೇತ್ರದಲ್ಲಿ ಅದೃಷ್ಟ ಪರೀಕ್ಷೆ ಮಾಡಬಹುದು.

ಶುಭದಿನ: 22. ಕನಕಧಾರಾ ಸ್ತೋತ್ರ ಪಠಿಸಿರಿ.




ಪರಿಶ್ರಮಕ್ಕೆ ತಕ್ಕಂತೆ ಫಲಿತಾಂಶ ನಿಮಗೆ ದೊರೆಯಲಿದೆ. ನೀವು ಈಗಾಗಲೇ ಮಾಡಿದ ಒಳ್ಳೆ ಕೆಲಸಕ್ಕೆ ಪುರಸ್ಕಾರಗಳು ಲಭಿಸಲಿವೆ. ಕೌಟುಂಬಿಕ ಜೀವನ ಆರಾಮವಾಗಿ ಇರುತ್ತದೆ. ಲೌಕಿಕ ವ್ಯವಹಾರಗಳಲ್ಲಿ ಸಂತೃಪ್ತಿಯನ್ನು ಅನುಭವಿಸಲಿದ್ದೀರಿ.

ಶುಭದಿನ: 25. ಚಂಡಿ ಪಾರಾಯಣ ಮಾಡಿರಿ.

DHEEPAM
LAMP OIL
BLEND OF 5 OILS
ದೀಪದ ಬೆಳಕಲ್ಲಿ
ಒಂದು ದೈವೀಕ
ಅನುಭವ
ಸುಗಂಧ ಸುವಾಸನೆ
ಹರಡುವ ಪಂಚ ದೀಪ ಎಣ್ಣೆ
